

ಭಾರತದ ರಾಷ್ಟ್ರಪತಿಗಳಿಂದ 2013ರಲ್ಲಿ ಸುರೇಶ್ ಧೋಂಡ್ಗೆ ಅವರಿಗೆ ರಾಷ್ಟ್ರ ಪುರಸ್ಕಾರ

ಹೆಣ್ಣು ಮಕ್ಕಳು ಹುಟ್ಟಿದರು. ಅವರಿಗಿಟ್ಟ ಹೆಸರು 'ಸ್ವರ' ಮತ್ತು 'ಸೌಂದರ್ಯ'.

## ಸಾಧ್ಯತೆಯ ಹೊಸಜಗತ್ತು

ಇಷ್ಟೆಲ್ಲದರ ನಡುವೆ ಸುರೇಶ್ ಅವರ ವಿದ್ಯಾಭ್ಯಾಸದ ಹಸಿವು ಹಿಂಗಿರಲಿಲ್ಲ. ಅವರು 'ಕಮ್ಯುನಿಟಿ ಡೆವಲೆಪ್‌ಮೆಂಟ್'ನಲ್ಲಿ ಎಂ.ಎಸ್. ಡಬ್ಲ್ಯು. ಪದವಿ ಪಡೆದರು. ಅದೇ ಸಮಯದಲ್ಲಿ ಸುರೇಶ್ ಕಾನೂನಿನ ಜ್ಞಾನ ತಮ್ಮ ಕೆಲಸಕ್ಕೆ ಅಗತ್ಯ ಅನಿಸಿ ಎಲ್.ಎಲ್.ಬಿ. ಮಾಡಿದರು. ಈಗ ಸುರೇಶ್ ಎಲ್.ಎಲ್.ಎಮ್. ಮಾಡುತ್ತಿದ್ದಾರೆ, ಇದು ಅವರ ನಾಲ್ಕನೇ ಸ್ನಾತ್ತಕೋತ್ತರ ಪದವಿ!

'ಇಷ್ಟೊಂದು ಪದವಿಗಳೇಕೆ?' ನಾನು ಕೇಳಿದೆ.

'ಬಾಲ್ಯದಲ್ಲಿ ಕುಷ್ಠರೋಗದ ಕಾರಣದಿಂದ ಶಾಲೆಯಿಂದ ಹೊರಬರಬೇಕಾಯಿತು. ಇಂದು ನಾನು ಹೆಚ್ಚು ಹೆಚ್ಚು ಓದಿ, ವಿಶ್ವದಲ್ಲಿಯೇ ಅತಿ ಹೆಚ್ಚು ವಿದ್ಯಾಭ್ಯಾಸವನ್ನು– ಪದವಿಗಳನ್ನು– ಪಡೆದ ಕುಷ್ಠರೋಗಿ ಅನಿಸಿಕೊಳ್ಳಲು ಬಯಸುತ್ತೇನೆ' ಅವರು ಹೇಳಿದರು. ಅವರ ಇಷ್ಟೆಲ್ಲ ಡಿಗ್ರಿಗಳು ಬೇರೆ ಬೇರೆ ಕಂಡರೂ, ಅವೆಲ್ಲವೂ ಅವರ ಕುಷ್ಠರೋಗವನ್ನು ಕುರಿತ ಹೋರಾಟಕ್ಕೆ, ಜನರಲ್ಲಿ ಅರಿವು ಮೂಡಿಸುವ ಉದ್ದೇಶಕ್ಕೆ ಪರಸ್ಪರ ಪೂರಕವಾಗಿವೆ. ಇದೀಗ ಸುರೇಶ್ ಮೇಘಾಲಯದ ಶಿಲಾಂಗ್‌ನ 'ಮಾರ್ಟಿನ್ ಲೂಥರ್ ವಿಶ್ವವಿದ್ಯಾಲಯ'ದಲ್ಲಿ ಡಾಕ್ಟರೇಟ್ ಪದವಿಗೆ ಸಂಶೋಧನೆ ನಡೆಸುತ್ತಿದ್ದಾರೆ. ಅವರ ಮಹಾಪ್ರಬಂಧದ ವಿಷಯ: 'ಲೆಪ್ರಸಿ – ಕಮ್ಯುನಿಟಿ ಬೇಸ್ಡ್ ಇನ್‌ಕ್ಲೂಸಿವ್ ಡೆವಲಪ್‌ಮೆಂಟ್' (ಕುಷ್ಠರೋಗ – ಸಮುದಾಯದ ಮೂಲಕ ಅಂತರ್ಗತ ಪ್ರಗತಿ). 'ಇದೇ ಜುಲೈ 2025ರ ಹೊತ್ತಿಗೆ ಥೀಸಿಸ್ ಬರೆದು ಸಬ್‌ಮಿಟ್ ಮಾಡಲಿದ್ದೇನೆ' ಎಂದವರು ಹರ್ಷದಿಂದ ತಿಳಿಸಿದರು.

ವಿ.ಟಿ.ಸಿಯಲ್ಲಿ ಜವಾನನಾಗಿ, ಆಫೀಸ್ ಬಾಯ್ ಆಗಿ, ಕಂಪ್ಯೂಟರ್ ಇನ್‌ಸ್ಟ್ರಕ್ಟರ್ ಆಗಿ, ಪ್ಲೇಸ್‌ಮೆಂಟ್ ಆಫೀಸರ್ ಆಗಿದ್ದ ಸುರೇಶ್ ಈಗ ಪ್ರೋಗ್ರಾಮ್ ಮ್ಯಾನೇಜರ್ ಹುದ್ದೆಗೆ ಏರಿದ್ದರು. ಲೆಪ್ರಸಿ ಮಿಷನ್‌ನ ಅಮ್ರಾವತಿ ಜಿಲ್ಲೆಯ 'ಕಮ್ಯುನಿಟಿ ಬೇಸ್ಡ್ ರಿಹ್ಯಾಬಿಲಿಟೇಶನ್' ಪ್ರಾಜೆಕ್ಟ್ ಅವರದಾಗಿತ್ತು. ಈ ಯೋಜನೆಯಡಿಯಲ್ಲಿ ಕುಷ್ಠರೋಗಿಗಳಿಗೆ ಉದ್ಯೋಗ ಕೊಡಿಸಲು ಸತತವಾಗಿ ಪ್ರವಾಸ ಮಾಡಿದರು. ಇಂದಿಗೆ ಸುಮಾರು 10000ಕ್ಕೂ ಹೆಚ್ಚಿನ ಕುಷ್ಠರೋಗಿಗಳನ್ನು ಮತ್ತು ಅಂಗವಿಕಲರನ್ನು ಉದ್ಯೋಗದಲ್ಲಿ ನೆಲೆನಿಲ್ಲಿಸಲು ಸುರೇಶ್ ಕಾರಣರಾಗಿದ್ದಾರೆ. ಕುಷ್ಠರೋಗವನ್ನು ಕುರಿತಂತೆ ಜಾಗೃತಿ ಮೂಡಿಸಲು ದುಡಿಯುತ್ತಲೇ ಇದ್ದಾರೆ. ಅವರ ಶ್ಲಾಘನೀಯ ಕೆಲಸ ಎಲ್ಲರ ಗಮನ ಸೆಳೆದಿದೆ. 2013ರಲ್ಲಿ, ಸುರೇಶ್ ಅವರನ್ನು 'ರೋಲ್ ಮಾಡೆಲ್' ವಿಭಾಗದಲ್ಲಿ ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿತ್ತು; ಸುರೇಶ್ ಅವರು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ಪುರಸ್ಕಾರವನ್ನು ಸ್ವೀಕರಿಸಿದ್ದರು.

ಪತಿಯ ಉದಾಹರಣೆ ಎದುರಿಗಿರುವಾಗ,

### ಬಲು ನಿಧಾನದ ರೋಗ

ಕುಷ್ಠರೋಗ ಬಲು ನಿಧಾನವಾಗಿ ಕಾಣಿಸಿಕೊಳ್ಳುವ ರೋಗ. ಸೋಂಕು ತಾಗಿದ ಆದೆಷ್ಟೋ ವರ್ಷಕ್ಕೆ ರೋಗದ ಮೊದಲ ಲಕ್ಷಣಗಳು ಕಾಣಿಸಿಕೊಳ್ಳಬಹುದು, ಕೆಲವೊಮ್ಮೆ ಹತ್ತು–ಇಪ್ಪತ್ತು ವರ್ಷಗಳೂ ಆಗಬಹುದು. ಆದರೆ ಇದು ಹೆಚ್ಚು ಸಾಂಕ್ರಾಮಿಕವಲ್ಲದ ರೋಗ, ಬಲುಬೇಗ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಲ್ಲ. ಇದು 'ಮೈಕೋಬ್ಯಾಕ್ಟೀರಿಯಮ್ ಲೆಪ್ರೇ' ಎಂಬ ಬ್ಯಾಕ್ಟೀರಿಯಾ ಸೋಂಕಿನಿಂದ ಬರುವ ರೋಗ.

ಕುಷ್ಠರೋಗದ ಬ್ಯಾಕ್ಟೀರಿಯಾದ ಸೋಂಕು ತಾಗಿದ್ದರೂ, ಶೇ. 95ರಷ್ಟು ಜನರಲ್ಲಿ ಕುಷ್ಠರೋಗದ ವಿರುದ್ಧ ಸಹಜವಾಗಿಯೇ ರೋಗನಿರೋಧಕ ಶಕ್ತಿ ಇದೆ. ಹಾಗೆ ನೋಡಿದರೆ, ಮಾನವ ದೇಹ ಕ್ಷಯರೋಗ, ಎಬೋಲಾ ಮತ್ತಿತರ ವೈರಲ್ ರೋಗಗಳಿಗೆ ಇದಕ್ಕಿಂತ ಕಡಿಮೆ ಇಮ್ಯುನಿಟಿ ಪಡೆದಿದೆ. ಆದರೆ ಕುಷ್ಠರೋಗಿಗಳ ವಿರುದ್ಧ ಮಾತ್ರ ಕಾನೂನುಗಳಿವೆ. ಇಂದು ಪೋಲಿಯೊ, ಸಿಡುಬನ್ನು ಬಹುಪಾಲು ನಿರ್ಮೂಲನ ಮಾಡಿದ ಹಾಗೆ ಕುಷ್ಠರೋಗವನ್ನು ನಿರ್ಮೂಲನ ಮಾಡಲು ಸಾಧ್ಯವಿದೆ.